**ಒ.ಎಸ್.ನಂ. 238/20**
**ಪಿ. ಡಬ್ಲೂ-1**

**ದಿನಾಂಕಃ 04.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ವಾದಿ / ಪ್ರತಿವಾದಿ ಪರ ಶ್ರೀ ವಕೀಲರಿಂದಃ-**

ನಾನು ಪಿ.ಯು.ಸಿ ವರೆಗೂ ವ್ಯಾಸಂಗ ಮಾಡಿರುತ್ತೇನೆ. ನಿಪಿ 1 ರಲ್ಲಿ ವಾದಿ 1 ರಿಂದ 3 ರವರು ಬೆಂಗಳೂರಿನಲ್ಲಿ ವಾಸ ಇರುತ್ತಾರೆ, ಆದ ಕಾರಣ ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ ಎಂದು ಹೇಳಿರುವುದು ಬಿಟ್ಟರೇ ಬೇರೆ ಯಾವುದೇ ಕಾರಣ ನಮೂದಿಸಿಲ್ಲ ಎಂದರೆ ಸರಿ. ಸದರಿ ದಾಖಲೆಯ ಖಂಡಿಕೆ 8 ರಲ್ಲಿ 8 ಲಕ್ಷ ಹಣವನ್ನು ನೀಡಿರುವ ಬಗ್ಗೆ ನಮೂದು ಇರುತ್ತದೆ ಡಿ.ಡಿ ನಗದಾಗಿ ನೀಡಿರುವ ಸಂಬಂಧ ದಾಖಲೆ ಹಾಜರುಪಡಿಸುತ್ತಿರಾ ಎಂದರೆ ಹಾಜರುಪಡಿಸುತ್ತೇನೆ. ಪ್ರತಿವಾದಿ 1 ರವರ ಸ್ವತ್ತನ್ನು ಬಿಡಿಸಿಕೊಳ್ಳುವ ಸಲುವಾಗಿ ನಿಪಿ 1 ದಾಖಲೆ ಸೃಷ್ಟಿಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ 8 ಲಕ್ಷ ಕಾಣಿಸಿರುವ ವ್ಯವಹಾರಕ್ಕೆ ಯಾವುದೇ ಆದಾರ ಇಲ್ಲ ಎಂದರೆ ಸರಿಯಲ್ಲ. ದಿಃ01.05.1985 ರ ಕರಾರು ಪತ್ರ ಮತ್ತು ದಿಃ30.05.1985 ರ Made over Agreement ಪತ್ರವನ್ನು ವಾದಿ 1 ರಿಂದ 4 ರವರಿಗೆ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗಳ ಪರವಾಗಿ ನನ್ನನ್ನು ಮುಂದೆ ಬಿಡಲು ನಿಪಿ 1 ನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರಂತೆ ದಾವಾ ಸ್ವತ್ತಿನ ಸ್ವಾಧೀನ ನನಗೆ ವರ್ಗಾವಣೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಮೂಲತಃ ಕೃಷ್ಟಿ ಕುಟುಂಬದವನು. ಹಂಗಾಮಿ ಮತ್ತು ಖಾಯಂ ಸಾಗುವಳಿ ಎಂದು 2 ವಿಧ ಇರುತ್ತದೆ ಎಂದರೆ ಗೊತ್ತಿಲ್ಲ. ದರಕಾಸ್ತು ಜಮೀನನ್ನು ಮಂಜೂರು ಮಾಡಬೇಕಾದರೆ ಮೊದಲು ಹಂಗಾಮಿ ಸಾಮವಳಿ ನೀಡಿ ನಂತರ ಖಾಯಂ ಸಾಗುವಳಿ ನೀಡುತ್ತಾರೆ ಎಂದರೆ ಸರಿಯಲ್ಲ.

1975 ರಲ್ಲಿ ನೀಡಿರುವ ಹಂಗಾಮಿ ಅಥವಾ ಖಾಯಂ ಸಾಗುವಳಿ ಚೀಟಿ ಇರುತ್ತದಾ ಎಂದರೆ ಸಾಕ್ಷಿ ನನಗೆ ಹಂಗಾಮಿ ಸಾಗುವಳಿ ಬಗ್ಗೆ ಗೊತ್ತಿಲ್ಲ, ನಮ್ಮ ಬಳಿ ಖಾಯಂ ಸಾಗುವಳಿ ಚೀಟಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಾಗುವಳಿ ಚೀಟಿಯನ್ನು ಹಾಜರುಪಡಿಸುತ್ತೇನೆ. ಸಾಕ್ಷಿ ಕಡತದಲ್ಲಿ ಇರುವ

ದಾಖಲೆಗಳನ್ನು ಪರಿಶೀಲಿಸಿ un-exibit ಸಾಗುವಳಿ ಚೀಟಿಯನ್ನು ತೋರಿಸಿರುತ್ತಾರೆ. 1 ನೇ ವಾದಿಗೆ ನೀಡಿರುವ ಮೂಲ ಸಾಗುವಳಿ ಚೀಟಿ ನಮ್ಮ ಬಳಿ ಇರುವುದಿಲ್ಲ. 1975 ರಲ್ಲಿ ದಾವಾ ಸ್ವತ್ತು 1 ನೇ ವಾದಿಗೆ ಮಂಜೂರು ಆಗಿಲ್ಲ ಎಂದರೆ ಸರಿಯಲ್ಲ. 1972-73 ನೇ ಸಾಲಿನಲ್ಲಿ 1 ನೇ ವಾದಿಗೆ ದಾವಾ ಸ್ವತ್ತು ಮಂಜೂರು ಆಗಿರುತ್ತದೆ ಎಂದರೆ ಸರಿ. ನಿಪಿ 1 ಆಗುವ ಸಮಯದಲ್ಲಿ ಮೂಲ ಮಂಜೂರಾತಿ ಪತ್ರವನ್ನು ನೀಡಿರುತ್ತಾರಾ ಎಂದರೆ ಮಂಜೂರಾತಿ ಪತ್ರವನ್ನು ಹೊರತುಪಡಿಸಿ ಬೇರೆ ಎಲ್ಲಾ ಮೂಲ ದಾಖಲೆಗಳನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ 1 ನ್ನು ಹೊರತುಪಡಿಸಿ ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ದಾವೆ ಸಲ್ಲಿಸುವ ಸಮಯದಲ್ಲಿ ಸಂಬಂಧಪಟ್ಟ ಇಲಾಖೆಯಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ನ್ನು ಹೊರತುಪಡಿಸಿ 1 ನೇ ವಾದಿಯಿಂದ ದಾವಾ ಸ್ವತ್ತಿಗೆ ಸಂಬಂಧಪಟ್ಟ ಯಾವ ದಾಖಲೆಗಳು ನನಗೆ ವರ್ಗಾವಣೆ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ 1 ರ 4 ನೇ ಪುಟದಲ್ಲಿ ಸಾಕ್ಷಿಗಳಾಗಿ ಸಹಿ ಮಾಡಿರುವ ಸಾಕ್ಷಿದಾರರ ಪರಿಚಯ ಇರುತ್ತದೆ. ಇವತ್ತಿಗೂ ಸಹ ಅವರ ಮತ್ತು ನನ್ನ ನಡುವಿನ ಸಂಬಂಧ ಚೆನ್ನಾಗಿ ಇದೆ ಎಂದರೆ ಸರಿ. ದಾವಾ ಸ್ವತ್ತು ಆಗಲಿ ಅಥವಾ 1 ನೇ ಪ್ರತಿವಾದಿಯ ಸ್ವತ್ತಾಗಲಿ 1 ನೇ ವಾದಿಯ ಬೌಧಿಕ ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ 1 ಆದ ನಂತರ 2 ವರ್ಷಗಳ ಕಾಲ ನಾನು ಕಂದಾಯ ಪಾವತಿಸಿರುತ್ತೇನೆ. ಸದರಿ ಕಂದಾಯ ರಸೀದಿಗಳನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ 1 ಬೋರ್ ವೇಲ್ ಮತ್ತು 15X22 ಅಡಿ ಪಂಪಹೌಸ್ ಇರುತ್ತದೆ ಎಂದರೆ ಸರಿ. ನಿಪಿ 1 ರಲ್ಲಿ ಬೋರ್ ವೇಲ್ ಮತ್ತು ಪಂಪಹೌಸ್ ಇರುವ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ.

ನಿಪಿ 10 ರಂತೆ OS 122/13 ರ ಪ್ರತಿಯನ್ನು ನ್ಯಾಯಾಲಯದಿಂದ 2019 ರ ನಂತರ ಪಡೆದುಕೊಂಡಿರುತ್ತೇನೆ. ನಿಪಿ 10 ರ ದಾವೆ ಬಗ್ಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸಂಪೂರ್ಣ ಇಲ್ಲ ಕೆಲವೊಂದು ಗೊತ್ತು ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ 1 ನೇ ವಾದಿ ಏನು ತಕರಾರು ಸಲ್ಲಿಸಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ. ಸದರಿ ತಕರಾರಿನ ಪ್ರತಿಯನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೀರಾ ಎಂದರೆ ಗೊತ್ತಿಲ್ಲ. OS 122/13 ರ 1 ನೇ ಪ್ರತಿವಾದಿ ರಾಜು ಎಂಬುವವರ ಬಗ್ಗೆ ಮಾಹಿತಿ ಇರುತ್ತದೆ, ಅವರು ಈಗ ಜೀವಂತವಾಗಿರುವುದಿಲ್ಲ. 2013 ರ ಹಿಂದೆ 1 ನೇ ಪ್ರತಿವಾದಿ 1 ನೇ ವಾದಿಯ ಸ್ವತ್ತಿಗೆ ತೊಂದರೆ ಕೊಡುತ್ತಿದ್ದರು ಎಂಬುದರ ಬಗ್ಗೆ 1 ನೇ ವಾದಿ ಯಾವುದಾದರೂ ಕ್ರಮ ತೆಗೆದು

ಕೊಂಡ ಬಗ್ಗೆ ಮಾಹಿತಿ ಇದೆಯಾ ಎಂದರೆ 2013 ರ ನಂತರ ತೊಂದರೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ವಾದಿಯ ಸ್ವತ್ತಿಗೆ ನಿರಂತರವಾಗಿ ತೊಂದರೆ ಕೊಡುತ್ತಿದ್ದಾರೆ ಎಂದು ನಮೂದು ಆಗಿರುವುದು ತಪ್ಪು ಎಂದರೆ ಸರಿಯಲ್ಲ. ಪ್ರತಿವಾದಿಗಳು ಯಾವಾಗ ತೊಂದರೆ ಕೊಟ್ಟಿರುತ್ತಾರೆ ಎಂದು ನಿಖರವಾಗಿ ನಮೂದಿಸಲು ತೊಂದರೆ ಇತ್ತಾ ಎಂದರೆ ಇಲ್ಲಾ ಎಂದು ನುಡಿಯುತ್ತಾರೆ. ದಿಃ01.05.1985 ರಿಂದ ಇಲ್ಲಿಯವರೆಗೂ 1 ನೇ ವಾದಿ ಮತ್ತು ಅವರ ಕುಟುಂಬದವರು ಸ್ವಾಧೀನದಲ್ಲಿ ಇಲ್ಲದೇ ಇರುವುದರಿಂದ ಪ್ರತಿವಾದಿಗಳು ದಾವಾ ಸ್ವತ್ತಿಗೆ ತೊಂದರೆ ಕೊಡುವ ಪ್ರಶ್ನೇ ಉದ್ಭವಿಸುದಿಲ್ಲ ಎಂದರೆ ಸರಿಯಲ್ಲ. 2013 ರಿಂದ ಈ ದಾವೆ ಸಲ್ಲಿಸುವವರೆಗೂ 1 ನೇ ವಾದಿ, 1 ನೇ ಪ್ರತಿವಾದಿ ವಿರುದ್ಧ ಯಾವುದೇ ಕಾನೂನಾತ್ಮಕ ಕ್ರಮ ಕೈಗೊಂಡಿಲ್ಲ ಎಂದರೆ ಅಂತರಸಂತೆ ಪೊಲೀಸ್ ಠಾಣೆಗೆ 2 ಬಾರಿ ದೂರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದೂರು ನೀಡಿರುವ ಬಗ್ಗೆ ದಾಖಲೆ ಇಲ್ಲ. ಆ ರೀತಿ ಯಾವುದೇ ದೂರು ನೀಡಿಲ್ಲ ಹಾಗಾಗಿ ದಾಖಲೆ ಇಲ್ಲ ಎಂದರೆ ಸರಿಯಲ್ಲ. ದಿಃ18.12.2020 ರಲ್ಲಿ 1 ನೇ ವಾದಿ ಮೃತಪಟ್ಟಿರುತ್ತಾರೆ ಎಂದರೆ ಸರಿ. OS 122/13 ರಲ್ಲಿ ಈ ದಾವೆಯ 1 ನೇ ವಾದಿ ಅಥವಾ ಆ ದಾವೆಯ ಇತರೆ ಪ್ರತಿವಾದಿಗಳು ಯಾವುದೇ ಪ್ರತಿವಾದ ಪತ್ರ ಸಲ್ಲಿಸಿಲ್ಲ ಎಂದರೆ 2019 ಕ್ಕಿಂತ ಹಿಂದಿನ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಯಾವುದೇ ಪ್ರತಿವಾದಿಗಳು ತಕರಾರು ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

CR 89/20 ನ್ನು ಹೊರತುಪಡಿಸಿ ಬೇರೆ ಯಾವ ಪ್ರಕರಣಗಳು ದಾಖಲು ಆಗಿರುವುದಿಲ್ಲ. ಪ್ರತಿವಾದ ಪತ್ರದ ಪುಟ 14 ರ N ಖಂಡಿಕೆಯಲ್ಲಿ ಹೇಳಿರುವಂತೆ ಪ್ರಸನ್ನ, ಧರ್ಮೆಗೌಡ, ಹರೀಶ್ ನನ್ನ ಸ್ನೇಹಿತರು ಎಂದರೆ ಸರಿ. ದಿಃ20.12.2019 ರಲ್ಲಿ ದುರಸ್ಥಿಗಾಗಿ ಸಲ್ಲಿಸಿರುವ ಅರ್ಜಿ ನನ್ನ ಬಳಿ ಇದ್ದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಸದರಿ ಅರ್ಜಿ ದಾವೆ ಸಲ್ಲಿಸುವಾಗ ಯಾವ ಹಂತದಲ್ಲಿ ಇತ್ತು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಇರುತ್ತದೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಅದರ ಅಂತಿಮ ಆದೇಶ ಇಲ್ಲಿಯವರೆಗೂ ಆಗಿಲ್ಲ. ಪ್ರತಿವಾದಿ 1 ರವರು ನೀಡಿದ ತಕರಾರಿನ ಅನ್ವಯ ಸದರಿ ಅರ್ಜಿ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. 1 ನೇ ವಾದಿ ಸುಂದರದಾಸ ಬಿನ್ ದೊಡ್ಡಪ್ಪ ಎಂಬುವವರು GPA ಮಾಡಿಕೊಟ್ಟಿದ್ದು ಅದರ ಪ್ರತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಸಮಯದಲ್ಲಿ

ಸುಂದರದಾಸ ರವರು ಖಾಲಿ ಪತ್ರಕ್ಕೆ ಸಹಿ ಹಾಕಿ ಕೊಟ್ಟಿರುತ್ತಾರೆ ಎಂದು ಉಲ್ಲೇಖ ಮಾಡಿದ್ದು, 1 ನೇ ವಾದಿ ಮತ್ತು ಸುಂದರದಾಸ ರವರ ನಡುವೆ ಏನಾದರೂ ಪತ್ರ ವ್ಯವಹಾರ ಆಗಿದ್ದೀಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ GPA ರದ್ದಾಗಿರುವ ವಿಚಾರವಾಗಿ ದಿಃ10.10.2011 ರಂದು ಸುಂದರದಾಸ ಅವರಿಗೆ ನೋಟಿಸ್ ನೀಡಿರುತ್ತೇವೆ ಎಂದು ಹೇಳಿದ್ದು ಸದರಿ ನೋಟಿಸ್ ಪ್ರತಿ ಇದ್ದೀಯಾ ಎಂದರೆ ಸದರಿ ನೋಟಿಸ್ ಇರುವುದಿಲ್ಲ, ನ್ಯೂಸ್ ಪೇಪರ್ ಇರುತ್ತದೆ, ಸದರಿ ನ್ಯೂಸ್ ಪೇಪರ್ ಹಾಜರುಪಡಿಸಿಸುತ್ತೇನೆ ಎಂದು ನುಡಿಯುತ್ತಾರೆ. ಸುಂದರ ದಾಸ ರವರಿಗೆ ಖಾಲಿ ಕಾಗದ, ಚಾಪಾ ಕಾಗದ ಮತ್ತು GPA ಯನ್ನು 1 ನೇ ವಾದಿ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ದಿಃ10.10.2011 ರ ನೋಟಿಸ್ ನೀಡಿದ ನಂತರ 1 ನೇ ವಾದಿ ಸ್ವಾಧೀನದಲ್ಲಿ ಇದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ, ಸುಂದರದಾಸ ಮತ್ತು 2 ರಿಂದ 7 ನೇ ಪ್ರತಿವಾದಿಗಳು ಮತ್ತು ಪುಟ್ಟಮಾದಯ್ಯ ಕಂದಾಯ ಅಧಿಕಾರಿಗಳ ಜೊತೆ ಸೇರಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದು, ಸದರಿ ವಿಚಾರವಾಗಿ ದೂರು ನೀಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಎಲ್ಲಾ ಅಂಶಗಳನ್ನು ಈ ದಾವೆಗಾಗಿ ಸೃಷ್ಟ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ವಾದಿ 1 ರಿಂದ 4 ರವರು ಹೆಚ್.ಡಿ ಕೋಟೆ ಮೂಲ ನಿವಾಸಿಗಳು ಅಲ್ಲ ಎಂದರೆ ಸರಿಯಲ್ಲ. ಯಾವ ಊರಿನ ನಿವಾಸಿಗಳು ಎಂದರೆ ಹಳೆ ಮಗ್ಗೆ ಗ್ರಾಮದ ನಿವಾಸಿಗಳು ಎಂದು ನುಡಿದಿರುತ್ತಾರೆ. ಸದರಿ ಗ್ರಾಮದಲ್ಲಿ ವಾಸವಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸುತ್ತೀರಾ ಎಂದರೆ ವಾದಿಗಳನ್ನು ಕೇಳಿ ಹೇಳುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿ ಪತ್ರದ ಷೆಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತನ್ನು ನಿಪಿ 1 ರಲ್ಲಿ ಆಗಲಿ ಅಥವಾ ದಾವಾ ಷೆಡ್ಯೂಲ್ ನಲ್ಲಿ ಆಗಲಿ ನಮೂದಿಸಲು ತೊಂದರೆ ಇತ್ತಾ ಎಂದರೆ ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ನಮೂದಿಸದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪುಟ್ಟಮಾದಯ್ಯ ರವರ ಪರಿಚಯ ಇರುತ್ತದೆ. 1 ನೇ ವಾದಿ ದಿಃ01.05.1985 ರಂದು ತನ್ನ ದರ್ದು ನಿಮಿತವಾಗಿ ಪುಟ್ಟಮಾದಯ್ಯ ರವರಿಗೆ ಕರಾರು ಪತ್ರದ ಶುದ್ದ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದಲ್ಲಿ 36 ತಿಂಗಳ ಒಳಗಾಗಿ ಸರ್ಕಾರದ ಅನುಮತಿ ಪಡೆದುಕೊಂಡು ಕ್ರಯ ಪತ್ರ ಮಾಡಿಕೊಡುತ್ತೇನೆ ಎಂದು ಉಲ್ಲೇಖ ಇದೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ 1 ನೇ ವಾದಿ

ಮೂಲ ಮಂಜೂರಾತಿ ಪತ್ರವನ್ನು ಪುಟ್ಟಮಾದಯ್ಯನಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ದಾವಾ ಸ್ವತ್ತಿನ ಸ್ವಾಧೀನವನ್ನು ಪುಟ್ಟಮಾದಯ್ಯ ರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೆ ತಿಳಿದಿರುವ ಹಾಗೆ ಮೂಲ ಮಂಜೂರಾತಿ ಪತ್ರ 1 ನೇ ವಾದಿ ಕುಟುಂಬದವರ ಬಳಿ ಇರುತ್ತದೆ. ಸದರಿ ಪತ್ರವನ್ನು ಹಾಜರುಪಡಿಸಲು ತೊಂದರೆ ಇಲ್ಲ. ಸದರಿ ಮಂಜೂರಾತಿ ಪತ್ರ ವಾದಿಗಳ ಬಳಿ ಇಲ್ಲ ಎಂದರೆ ಸರಿಯಲ್ಲ. ಸದರಿ ಮೂಲ ಪತ್ರ OS 122/13 ರಲ್ಲಿ 1 ನೇ ಪ್ರತಿವಾದಿ ಹಾಜರುಪಡಿಸಿ ನಿಶಾನೆ ಆಗಿ ಗುರುತಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ದಿಃ01.05.1985 ರ ಕರಾರು ಪತ್ರ ಆದ ನಂತರ ದಾವಾ ಸ್ವತ್ತಿನ ಮೇಲೆ ಆಸಕ್ತಿ ಇಲ್ಲ ಮತ್ತು ಹಣಕಾಸಿನ ತೊಂದರೆಯಿಂದ ಪುಟ್ಟಮಾದಯ್ಯ ರವರು ದಾವಾ ಸ್ವತ್ತು ನನಗೆ ಬೇಡ ಎಂದು 1 ನೇ ವಾದಿಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಬೇರೆಯವರಿಗೆ Made over Agreement ಬರೆದುಕೊಡುವಂತೆ ಮತ್ತು 1 ನೇ ವಾದಿ ಕ್ರಯ ಪತ್ರ ಮಾಡಿಕೊಡುವಂತೆ ಪುಟ್ಟಮಾದಯ್ಯ ರವರಿಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಪುಟ್ಟಮಾದಯ್ಯ ಬೇರೆಯವರಿಗೆ ಕ್ರಯ ಪತ್ರ ಮಾಡಿಕೊಡುವ ಸಮಯದಲ್ಲಿ 1 ನೇ ವಾದಿ ಹೆಚ್ಚಿನ ಹಣ ಕೇಳುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ01.05.1985 ರ ಕರಾರು ಪತ್ರ ಆದರಿಸಿ ದಿಃ31.05.1985 ರಂದು ಪುಟ್ಟಮಾದಯ್ಯ ರೂ. 20 ಸಾವಿರ ಪಡೆದು 1 ನೇ ಪ್ರತಿವಾದಿಗೆ Made over Agreement ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಪುಟ್ಟಮಾದಯ್ಯ ರವರು 1 ನೇ ಪ್ರತಿವಾದಿಗೆ ಮೂಲ ಮಂಜೂರಾತಿ ಪತ್ರವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ 1 ನೇ ಪ್ರತಿವಾದಿಗೆ ಸ್ವಾಧೀನ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿಃ31.05.1985 ರಿಂದ ಇಲ್ಲಿಯವರೆಗೂ 1 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಶ್ಚಿಮ ಮತ್ತು ದಕ್ಷಿಣಕ್ಕೆ ಇರುವ ಆಜು ಬಾಜು ರವರ ಪರಿಚಯ ಇರುತ್ತದೆ, ಪೂರ್ವಕ್ಕೆ ಇರುವ ಕರೀಯಯ್ಯ ರವರ ಪರಿಚಯ ಇಲ್ಲ. ಸೋಮಯ್ಯ ರವರ ಜಮೀನಿನಲ್ಲಿ ಪಂಪಸೇಟ್ ಇದ್ದು ವ್ಯವಸಾಯ ಮಾಡುತ್ತಾರೆ. ಸದರಿ ಅವರು ವೃತ್ತಿಯಲ್ಲಿ ಶಿಕ್ಷಕನಾಗಿ ವಿರಾಜಪೇಟೆ ಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿನ ಆಜು ಬಾಜುದವರ ಪರಿಚಯ ಇಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ15.11.2012 ಮತ್ತು ದಿಃ17.03.2013 ರಂದು ರಾಜು ಎಂಬುವವರು 1 ನೇ ಪ್ರತಿವಾದಿಯ ಸ್ವತ್ತಿಗೆ ತೊಂದರೆ ಕೊಟ್ಟಿದ್ದರಿಂದ 1 ನೇ ಪ್ರತಿವಾದಿ ನಿಪಿ 10 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ 2013 ಹಿಂದಿನ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವೆ ಸಲ್ಲಿಸುವ ಸಮಯದಲ್ಲಿ OS 122/13 ರ ಪ್ರತಿ ಇತ್ತು. ಸದರಿ ದಾವೆ ಯಾರು ಯಾರ ವಿರುದ್ಧ ಸಲ್ಲಿಸಿರುತ್ತಾರೆ ಎಂದು ಗೊತ್ತಿತ್ತು ಎಂದರೆ ಸರಿ. ದಿಃ30.03.2019 ಮತ್ತು 06.09.2020 ರಂದು ನೀಡಿರುವ ದೂರಿನ ಪ್ರತಿ ಇದ್ದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಆ ಸಂಬಂಧವಾಗಿ ಯಾವುದೇ ಬರವಣಿ ಆಗಿರುವುದಿಲ್ಲ. ಯಾವುದೇ ದೂರು ಕೊಡದೇ ಇದ್ದರೂ ದಾವೆ ಸಲ್ಲಿಸಲು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಿಃ20.11.2012 ರಂದು ರಾಜು ಎಂಬುವವರು 1 ನೇ ಪ್ರತಿವಾದಿಯಿಂದ ಪ್ರತಿವಾದ ಪತ್ರದ ಷೆಡ್ಯೂಲ್ ನ್ನು ಬಿಡಿಸಿಕೊಡುವಂತೆ ತಹಶೀಲ್ದಾರ್ ಮತ್ತು ಎ,ಸಿ ಅವರಿಗೆ ಅರ್ಜಿ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಸದರಿ ವಿಚಾರವಾಗಿ 1 ನೇ ಪ್ರತಿವಾದಿ ಸ್ವಾಧೀನ ಇರುತ್ತಾರೆ ಎಂದು ದೃಡೀಕರಣ ಕೊಟ್ಟಿರುತ್ತಾರೆ ಎಂದರೆ ಮಾಹಿತಿ ಇಲ್ಲ. ದಿಃ11.02.2019 ರಂದು 1 ನೇ ಪ್ರತಿವಾದಿ ಸಾರ್ವಜನಿಕ ತಿಳುವಳಿಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರತಿಕಾ ಪ್ರಕರಣೆಯಲ್ಲಿ ನನ್ನೊಂದಿಗೆ ಯಾರು ವ್ಯವಹರಿಸಬಾರದು ಎಂದು ತಿಳಿಸಿದ್ದರು ಎಂದರೆ ಮಾಹಿತಿ ಇಲ್ಲ. ದಿಃ12.02.2019 ರಂದು ನನಗೆ ಮತ್ತು ವಾದಿಗಳಿಗೆ ನೋಟಿಸ್ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿಃ06.02.2019 ರಂದು ನನಗೆ ಕರಾರು ಆಗಿರುತ್ತದೆ ಎಂದು ಉಲ್ಲೇಖಿಸಿರುವುದಿಲ್ಲ. ಸದರಿ ಕರಾರನ್ನು ರದ್ದುಪಡಿಸುವಂತೆ ದಿಃ12.07.2019 ರಂದು ನೋಟಿಸ್ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ನೋಟಿಸ್ ನನಗೆ ಜಾರಿ ಆಗಿರುವುದಿಲ್ಲ. 2020 ರಲ್ಲಿ ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ 10-12 ಲಕ್ಷ ಇರುತ್ತದೆ. ದಾವಾ ಸ್ವತ್ತನ್ನು ಕಡಿಮೆ ಬೆಲೆಗೆ ಕೊಟ್ಟಿರುತ್ತೇನೆ ಎಂದು 1 ನೇ ವಾದಿ ನನಗೆ ನಿಪಿ 1 ಬರೆದುಕೊಟ್ಟು ದಾವಾ ಸ್ವತ್ತನ್ನು ಪಡೆಯಲು ಪ್ರಯತ್ನಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಿಃ26.03.2019 ನಾನು 1 ನೇ ಪ್ರತಿವಾದಿ ಸ್ವತ್ತಿಗೆ ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಿಃ27.03.2019 ರಂದು ನನಗೆ ಮತ್ತು ಕಂದಾಯ ಅಧಿಕಾರಿಗೆ ಮತ್ತು ಪೊಲೀಸ್ ಅಧಿಕಾರಿಗೆ ನೋಟಿಸ್ ಕೊಟ್ಟಿರುತ್ತಾರೆ ಎಂದರೆ ನನಗೆ ನೋಟಿಸ್ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಊರು ಈರೇಗೌಡನ ಹುಂಡಿ ಎಂದರೆ ಸರಿ.

ದಿಃ27.03.2019 ಮತ್ತು 30.05.2019 ರಂದು ನನ್ನ ವಿರುದ್ದ ಠಾಣೆಗೆ ದೂರು ಕೊಟ್ಟಿರುತ್ತಾರೆ ಎಂದರೆ ಮೊದಲು ನಾನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಮಾರ್ಚ, ಜೂನ್ ಮತ್ತು ನವೆಂಬರ್ ತಿಂಗಳಲ್ಲಿ ದೂರು ಕೊಟ್ಟಿದ್ದು ಸದರಿ ದೂರಿನ ಪ್ರತಿ ಹಾಜರುಪಡಿಸುತ್ತೇನೆ. ದಿಃ16.06.2019 ರಂದು ನಾನು ಮತ್ತು ನನ್ನ ಸಹಚರರು 1 ನೇ ಪ್ರತಿವಾದಿ ಸ್ವತ್ತಿಗೆ ಮತ್ತು 2 ರಿಂದ 7 ಪ್ರತಿವಾದಿಗೆ ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅದೇ ದಿನ ನನ್ನ ವಿರುದ್ದ 1 ನೇ ಪ್ರತಿವಾದಿ ದೂರು ಕೊಟ್ಟಿರುತ್ತಾರೆ ಎಂದರೆ ಸುಳ್ಳು ದೂರು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದೂರಿಗೆ ಹಿಂಬರಹ ನೀಡಿದ್ದರಿಂದ PCR 72/19 ರಂತೆ ದೂರು ಸಲ್ಲಿಸಿರುತ್ತಾರೆ ಎಂದರೆ ಸರಿ. ಸುಳ್ಳು ದೂರು ಎಂದು ನುಡಿಯುತ್ತಾರೆ. ನಂತರ CC 76/19 ರಂತೆ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಮೊಕ್ಕದಮೆ ಸಂಖ್ಯೆ 66/19 ರಂತೆ ನನ್ನ ಮತ್ತು 1 ನೇ ಪ್ರತಿವಾದಿ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ವಿಚಾರವಾಗಿ MAG 17/19-20 ರಂತೆ ತಹಶೀಲ್ದಾರ್ ನ್ಯಾಯಾಲಯದಲ್ಲಿ ದಾಖಲಾಗಿರುತ್ತದೆ ಆಗಿರುತ್ತದೆ ಎಂದರೆ ಸರಿ. ದಿಃ27.11.2019 ರಂದು ಸದರಿ MAG ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ಅರ್ಜಿ ವಜಾ ಆಗುವ ಮುನ್ನ ತಹಶೀಲ್ದಾರವರು ಖುದ್ದಾಗಿ ಸ್ಥಳ ಪರಿಶೀಲಿಸಿದ್ದರು ಎಂದರೆ ಮಾಹಿತಿ ಇಲ್ಲ. ಸದರಿ ಆದೇಶ ಪ್ರತಿ ಹಾಜರುಪಡಿಸಲು ತೊಂದರೆ ಇಲ್. ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಇದೇ ನ್ಯಾಯಾಲಯದಲ್ಲಿ 89/20 ರಂತೆ ನನ್ನ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದಿಂದ ಬಚಾವಾಗಲು 1 ನೇ ಪ್ರತಿವಾದಿಯ ವಿರುದ್ದ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಮೊಕ್ಕದಮೆ ಸಂಖ್ಯೆ 90/20 ರಂತೆ ಪ್ರತಿವಾದಿಗಳ ವಿರುದ್ಧ ಪ್ರಕರಣ ದಾಖಲು ಆಗಿರುತ್ತದೆ ಎಂದರೆ ಸರಿ. ದಿಃ29.11.2020 ರಂದು ಪ್ರತಿವಾದಿಗಳ ಸ್ವಾಧೀನಕ್ಕೆ ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ..ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**